ಮಂಗಳಾ ಸಿ.

# ಅವಳ ಪ್ರಶ್ನೆ

ನನ್ನ ಜೀವನದ ಉದ್ಯೋಗಪರ್ವ ಶುರುವಾದ ಮೇಲೆ, ಮರದಿಂದ ಮರಕ್ಕೆ ನೆಗೆಯುವ ಮರ್ಕಟದಂತೆ ವರ್ಷಕ್ಕೆ ಎರಡು ಮೂರು ಕಡೆ ಕೆಲಸ ಬದಲಿಸುವುದು ನನಗೆ ಸಾಮಾನ್ಯ ಸಂಗತಿಯಾಗಿತ್ತು. ಹಾಗೆ ಮತ್ತೊಂದು ಗಾರ್ಮೆಂಟ್ಸ್ ಫ್ಯಾಕ್ಟರಿಯೊಂದಕ್ಕೆ ಸೇರಿದ್ದೆ.

ಕೆಲಸಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಎಲ್ಲರನ್ನೂ ಸೆಳೆಯುವ ಅವಳನ್ನು ನಾನು ಕಂಡಿದ್ದು. ಮೊದಲ ಸಲ ಅವಳನ್ನು ನೋಡಿದಾಗ 'ಇಂಥ ಬ್ಯೂಟಿ ಇಲ್ಲಿ, ಈ ಜಾಗದಲ್ಲಿ ಕೆಲ್ಸ ಮಾಡ್ತಾ ಇದ್ಯಾ?' ಎಂದು ಹುಬ್ಬೇರಿಸಿದ್ದೆ. ಈ ಮೊದಲು ನಾನು ಕೆಲಸ ಮಾಡುತ್ತಿದ್ದ ಕಡೆಗಳಲ್ಲಿ ಚೆಲುವೆಯರನ್ನು ನೋಡಿದ್ದೆನಾದರೂ ಇಂತಹ ಚೆಲುವೆಯರಲ್ಲಿ ಚೆಲುವೆಯನ್ನು ನೋಡಿರಲಿಲ್ಲ. ಆದರೆ, ಆ ಅಪೂರ್ವ ಚೆಲುವಿಗೆ ಬೆಲೆಕೊಡದ ಜನ ಅವಳನ್ನು ಪುಂಖಾನುಪುಂಖವಾಗಿ ಆಡಿಕೊಂಡು ನಗುತ್ತಿದ್ದರು. ಅವಳ ಬೆನ್ನ ಹಿಂದೆ 'ಸರಿಯಿಲ್ಲ' ಎಂದು ಹೇಳುವುದು ಅಲ್ಲಿ ಕೆಲಸಕ್ಕೆ ಸೇರಿದ ಮೂರು ನಾಲ್ಕು ದಿನಕ್ಕೆ ನನ್ನ ಕಿವಿಯ ಮೇಲೆ ಬಿತ್ತು. ಆದರೆ, ಅವಳು

